# 5. ನಿಯಂತ್ರಣ ಮತ್ತು ಸಹಭಾಗಿತ್ವ

**1. ಮೆದುಳಿನ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಘಟಕ ಯಾವುದು?** ನ್ಯೂರಾನ್ (ನರಕೋಶ)

**2. ನರಕೋಶದ ಪ್ರಮುಖ ಭಾಗಗಳಾವುವು?** ಡೆಂಡ್ರೈಟ್, ಕೋಶಕಾಯ, ಆಕ್ಸಾನ್ ಮತ್ತು ನರತುದಿ.

**3. ಡೆಂಡ್ರೈಟ್‌ಗಳ ಕಾರ್ಯವೇನು?**

* ಪ್ರಚೋದನೆಯನ್ನು ಸ್ವೀಕರಿಸುತ್ತವೆ.
* ನರಕೋಶವು ಕಾರ್ಯಪ್ರವೃತ್ತಿ ಹೊಂದಲು ವಿದ್ಯುತ್ ಆವೇಗಗಳನ್ನು ಕೋಶಕಾಯಕ್ಕೆ ಸಾಗಿಸುತ್ತವೆ.

**4. ಆಕ್ಸಾನ್‌ನ ಕಾರ್ಯ ತಿಳಿಸಿ.**

ಆಕ್ಸಾನ್ ನರಕೋಶದಿಂದ ಹೊರಟ ಉದ್ದನೆಯ ರಚನೆಯಾಗಿದ್ದು, ವಿದ್ಯುತ್ ಆವೇಗಗಳನ್ನು ನರಕೋಶದಿಂದ ಹೊರಗೆ ಸಾಗಿಸುತ್ತದೆ.

**5. ಸಂಸರ್ಗದ ಕಾರ್ಯವೇನು?**

ಸಂಸರ್ಗವು ಅಂತಿಮವಾಗಿ ನರಾವೇಗಗಳನ್ನು ನರಕೋಶಗಳಿಂದ ಸ್ನಾಯುಕೋಶಗಳು ಅಥವಾ ಗ್ರಂಥಿಗಳಂತಹ ಇತರ ಜೀವಕೋಶಗಳಿಗೆ ವಿತರಿಸಲು ಅನುವು ಮಾಡಿಕೊಡುತ್ತದೆ.

**6. ಪರಾವರ್ತಿತ ಕ್ರಿಯೆ ಎಂದರೇನು?**

ಪರಿಸರದಲ್ಲಿ ಉಂಟಾಗುವ ಘಟನೆಗಳಿಗೆ ಉಂಟಾಗುವ ಹಠಾತ್ ಪ್ರತಿಕ್ರಿಯೆಗೆ ಪರಾವರ್ತಿತ ಕ್ರಿಯೆ ಎಂದು ಹೆಸರು.

**7. ಪರಾವರ್ತಿತ ಕ್ರಿಯೆಯ ಕೇಂದ್ರ ಯಾವುದು?** ಮೆದುಳು ಬಳ್ಳಿ

**8. ಪರಾವರ್ತಿತ ಚಾಪ ಎಂದರೇನು?**

ಜ್ಞಾನವಾಹಿ ನರಕೋಶ ಮತ್ತು ಕ್ರಿಯಾವಾಹಿ ನರಕೋಶಗಳ ನಡುವೆ ಏರ್ಪಡುವ ಸಂಪರ್ಕವನ್ನು ಪರಾವರ್ತಿತ ಚಾಪ ಎನ್ನುವರು.

**9. ಕೇಂದ್ರನರವ್ಯೂಹದ ಎರಡು ಘಟಕಗಳಾವುವು?** ಮೆದುಳು ಮತ್ತು ಮೆದುಳು ಬಳ್ಳಿಗಳು ಕೇಂದ್ರ ನರವ್ಯೂಹದ ಘಟಕಗಳು

**10. ದೇಹದ ಸಮನ್ವಯತೆಯ ಮುಖ್ಯ ಕೇಂದ್ರ ಯಾವುದು?** ಮೆದುಳು

**11. ಪರೀಧಿ ನರವ್ಯೂಹದ ಮುಖ್ಯ ಕಾರ್ಯವೇನು?**

ಕೇಂದ್ರ ನರವ್ಯೂಹ ಮತ್ತು ದೇಹದ ಇತರ ಭಾಗಗಳ ನಡುವೆ ಸಂವಹನ ಉಂಟುಮಾಡುತ್ತದೆ.

**12. ಪರೀಧಿ ನರವ್ಯೂಹದ ಘಟಕಗಳಾವುವು?** ಮೆದುಳಿನ ನರಗಳು ಮತ್ತು ಮೆದುಳು ಬಳ್ಳಿ ನರಗಳು

**13. ಆಲೋಚನೆಯ ಕೇಂದ್ರ ಯಾವುದು?** ಮುಮ್ಮೆದುಳು (ಮಹಾಮಷ್ತಿಷ್ಕ/ಸೆರೆಬ್ರಂ)

**14. ಅನೈಚ್ಚಿಕ ಕ್ರಿಯೆಗಳನ್ನು ನಿಯಂತ್ರಿಸುವ ಮೆದುಳನ ಭಾಗಗಳಾವುವು?** ಮಧ್ಯದ ಮೆದುಳು ಮತ್ತು ಹಿಮ್ಮೆದುಳು

**15. ಹಿಮ್ಮೆದುಳಿನ ಮೆಡುಲ್ಲಾದ ಕಾರ್ಯ ತಿಳಿಸಿ.**

ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಗಳಂಥ ಅನೈಚ್ಛಿಕ ಕ್ರಿಯೆಗಳನ್ನು ನಿಯಂತ್ರಿಸುತ್ತದೆ.

**16. ಅನುಮಸಿಷ್ಕದ ಕಾರ್ಯವೇನು?**

ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್ ಅನ್ನು ಎತ್ತಿಕೊಳ್ಳುವುದು, ಇಂತಹ ಚಟುವಟಿಕೆಗಳನ್ನು ಮಾಡಲು ದೇಹದ ಸಮತೋಲನವನ್ನು ಕಾಪಾಡಿಕೊಳ್ಳಲು ಕಾರಣವಾಗಿದೆ.

**17. ಮೆದುಳಿನ ದ್ರವದ ಕಾರ್ಯವೇನು?**

ಮೆದುಳು ಸೆರೆಬ್ರೋಸ್ಪೈನಲ್ ದ್ರವ ಹೊಂದಿದ್ದು. ಇದು ಮೆದುಳನ್ನು ಆಘಾತಗಳಿಂದ ರಕ್ಷಿಸುತ್ತದೆ.

**18. ಹಿಮ್ಮೆದುಳಿನ ಅನುಮಸ್ತಿಷ್ಕದ ಕಾರ್ಯ ತಿಳಿಸಿ.**

ಐಚ್ಛಿಕ ಕ್ರಿಯೆಗಳ ನಿಖರತೆ ಮತ್ತು ದೇಹದ ಭಂಗಿ ಹಾಗೂ ದೇಹದ ಸಮತೋಲನವನ್ನು ನಿಯಂತ್ರಿಸುತ್ತದೆ.

**19. ಮಿದುಳು ಬಳ್ಳಿಯನ್ನು ರಕ್ಷಿಸುವ ಭಾಗ ಯಾವುದು?** ಕಶೇರುಸ್ಥಂಭ ಅಥವಾ ಬೆನ್ನುಮೂಳೆ.

**20. ಸಸಂರ್ಗದಲ್ಲಿ ಎರಡು ನರಕೋಶಗಳ ಮಧ್ಯೆ ಏನಾಗುತ್ತದೆ?**

ಎರಡು ನರಕೋಶಗಳ ಮಧ್ಯೆ ವಿದ್ಯುತ್ ಆವೇಗವು ಒಂದು ದಿಕ್ಕಿನಲ್ಲಿ ಹರಡಲು ಒಂದು ವಿಧವಾದ ಕವಾಟವಾಗಿ ಕಾರ್ಯನಿರ್ವಹಿಸುತ್ತದೆ. ವಿದ್ಯುತ್ ಆವೇಗವು ಕೆಲವು ರಾಸಾಯನಿಕಗಳನ್ನು ಬಿಡುಗಡೆಮಾಡುತ್ತದೆ, ಈ ರಾಸಾಯನಿಕಗಳು ಸಂಸರ್ಗವನ್ನು ದಾಟುತ್ತವೆ ಮತ್ತು ಮುಂದಿನ ಡೆಂಡ್ರೈಟ್‌ಗಳಲ್ಲಿ ಇದೇ ರೀತಿಯ ವಿದ್ಯುತ್ ಆವೇಗಗಳನ್ನು ಪ್ರಾರಂಭಿಸುತ್ತವೆ. ಸಂಸರ್ಗ ಅಂತಿಮವಾಗಿ ನರಕೋಶಗಳಿಂದ ಸ್ನಾಯುಕೋಶಗಳು ಅಥವಾ ಗ್ರಂಥಿಗಳಂಥ ಇತರ ಜೀವಕೋಶಗಳಿಗೆ ನರಾವೇಗಗಳನ್ನು ವಿತರಿಸಲು ಅನುವು ಮಾಡಿಕೊಡುತ್ತದೆ.

**21. ನಾವು ಒಂದು ಅಗರಬತ್ತಿ(ಗಂಧದಕಡ್ಡಿ)ಯ ವಾಸನೆಯನ್ನು ಹೇಗೆ ಕಂಡುಹಿಡಿಯುತ್ತೇವೆ?**

ಅಗರಬತ್ತಿಯ ಹೊಗೆ ವಾಸನೆಯು ಮೂಗಿಗೆ ಸಂಪರ್ಕ ಹೊಂದಿದಾಗ, ಮೂಗಿನಲ್ಲಿರುವ ಲೋಳೆಯಂತಿರುವ ವಸ್ತುವಿನಲ್ಲಿ ಕರಗಿ, ನಾಸಿಕ ಕುಹರದ ಮೇಲ್ಭಾಗದ ಗೋಡೆಗಳಲ್ಲಿ ಜ್ಞಾನವಾಹಿ ನರವಾದ ಘ್ರಾಣ ನರದಲ್ಲಿ ವಾಸನೆಯನ್ನು ಗ್ರಹಿಸುವ ಗ್ರಾಹಕಗಳಿವೆ. ಇವುಗಳು ಮುಮ್ಮೆದುಳಿನ ವಾಸನೆ ಗ್ರಹಿಸುವ ಪ್ರದೇಶಕ್ಕೆ ತಲುಪಿದಾಗ ನಮಗೆ ವಾಸನೆಯ ಅರಿವಾಗುವುದು.

**22. ಪರಾವರ್ತಿತ ಕ್ರಿಯೆಯಲ್ಲಿ ಮೆದುಳಿನ ಪಾತ್ರವೇನು?**

ಪರಾವರ್ತಿತ ಕ್ರಿಯೆಗಳು ತತ್‌ಕ್ಷಣ ಜರುಗುವ ಕ್ರಿಯೆಗಳಾಗಿದ್ದು, ಇವುಗಳನ್ನು ಮಿದುಳು ಬಳ್ಳಿ ನಿಯಂತ್ರಿಸುತ್ತದೆ. ಹಾಗಾಗಿ ಪರಾವರ್ತಿತ ಕ್ರಿಯೆಗಳಲ್ಲಿ ಮಿದುಳಿನ ಕೆಲಸವೇನೂ ಇಲ್ಲ.

ಆದಾಗ್ಯೂ ಪ್ರಕರವಾದ ಬೆಳಕನ್ನು ಕಂಡತಕ್ಷಣವೇ ಕಣ್ಣಿನಪಾಪೆ ಸಂಕುಚಿಸುವುದು ಮಿದುಳಿನ ಮಹಾಮಸ್ತಿಷ್ಕದ ಚಟುವಟಿಕೆಯಿಂದ.

**23. ಸಸ್ಯ ಹಾರ್ಮೋನುಗಳು ಎಂದರೇನು?**

ಸಸ್ಯಗಳಲ್ಲಿ ನಿಯಂತ್ರಣ ಮತ್ತು ಸಹಭಾಗಿತ್ವನ್ನುಂಟುಮಾಡುವ ರಾಸಾಯನಿಕಗಳೇ ಸಸ್ಯ ಹಾರ್ಮೋನ್‌ಗಳು.

**24. ಸಸ್ಯ ಹಾರ್ಮೋನ್‌ಗಳನ್ನು ಹೆಸರಿಸಿ.** ಆಕ್ಸಿನ್, ಜಿಬ್ಬರೆಲ್ಲಿನ್, ಇಥಿಲಿನ್, ಸೈಟೋಕೈನಿನ್, ಆಬ್ಸಿಸಿಕ್ ಆಮ್ಲ.

**25. ಸಸ್ಯಗಳಲ್ಲಿನ ಬೆಳವಣಿಗೆ ಹಾರ್ಮೋನುಗಳನ್ನು ಹೆಸರಿಸಿ.**

* ಆಕ್ಸಿನ್, ಜಿಬ್ಬರೆಲ್ಲಿನ್ ಮತ್ತು ಸೈಟೋಕೈನಿನ್‌ಗಳು: ಇವು ಬೆಳವಣಿಗೆ ವೃದ್ಧಿಸುವ ಹಾರ್ಮೋನುಗಳು
* ಆಬ್ಸಿಸಿಕ್ ಆಮ್ಲ ಮತ್ತು ಇಥಿಲಿನ್: ಇವು ಬೆಳವಣಿಗೆ ಕುಂಠಿತಗೊಳಿಸುವ ಹಾರ್ಮೋನುಗಳು

**26. ಸಸ್ಯಗಳಲ್ಲಿ ಗುರುತಿಸಲಾದ ಮೊದಲ ಹಾರ್ಮೋನು ಯಾವುದು?** ಆಕ್ಸಿನ್ (ಇಂಡೋಲ್ ಅಸಿಟಿಕ್ ಆಮ್ಲ IAA)

**27. ಆಕ್ಸಿನ್‌ಗಳ ಪ್ರಮುಖ ಕಾರ್ಯ ತಿಳಿಸಿ.**

* ಕೋಶವಿಭಜನೆ, ಕೋಶಗಳ ಉದ್ದ/ದಪ್ಪಗಳ ಹೆಚ್ಚಳ ಮತ್ತು ವಿಭೇದೀಕರಣವನ್ನು ಹೆಚ್ಚಿಸುವುದು
* ಸಸ್ಯಗಳಲ್ಲಿ ಬಿಳಿಲುಬೇರುಗಳನ್ನು ಬಿಡಲು ಪ್ರಚೋದಿಸುತ್ತದೆ
* ಬೇರು, ಹೂವು ಮತ್ತು ಮೊಗ್ಗುಗಳ ಬೆಳವಣಿಗೆಯನ್ನು ಉತ್ತೇಜಿಸುವುದು

**28. ಜಿಬ್ಬರೆಲ್ಲಿನ್‌ಗಳ ಕಾರ್ಯವನ್ನು ತಿಳಿಸಿ.**

* ಎಲೆ ಮತ್ತು ಚಿಗುರುಗಳ ಬೆಳವಣಿಗೆಯನ್ನು ಪ್ರೇರೇಪಿಸುತ್ತದೆ
* ಬೀಜ ಮತ್ತು ಮೊಗ್ಗುಗಳ ಸುಪ್ತಾವಸ್ಥೆಯನ್ನು ತಡೆಯುವುದು
* ಕಾಂಡ ಉದ್ದವಾಗಿ ಬೆಳೆಯಲು ಮತ್ತು ಹೂ ಅರಳಲೂ ಈ ಹಾರ್ಮೋನು ಸಹಾಯಕವಾಗಿದೆ

**29. ಸೈಟೋಕೈನಿನ್‌ಗಳ ಕಾರ್ಯ ತಿಳಿಸಿ.**

* ಕೋಶವಿಭಜನೆಯನ್ನು ಪ್ರಚೋಧಿಸುತ್ತದೆ, * ಪಾರ್ಶ್ವ ಮೊಗ್ಗುಗಳ ಬೆಳವಣಿಗೆಯನ್ನು,
* ಕಾಂಡಗಳ ಉದ್ದವನ್ನು ಹೆಚ್ಚಿಸಲು ಸಹಾಯಕ, * ಕೆಲವು ಸಸ್ಯಗಳಲ್ಲಿ ಪತ್ರರಂಧ್ರಗಳ ತೆರೆಯುವಿಕೆಯನ್ನು ಪ್ರಚೋದಿಸುತ್ತದೆ.

**30 ಇಥಿಲಿನ್‌ನ ಕಾರ್ಯಗಳನ್ನು ಪಟ್ಟಿಮಾಡಿ.**

* ಇದು ಸಸ್ಯಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ಹಾರ್ಮೋನು,
* ಹೂವು ಮತ್ತು ಎಲೆಗಳು ಉದುರಲು ಪ್ರಚೋದಿಸುತ್ತದೆ, * ಹಣ್ಣುಗಳ ಮಾಗುವಿಕೆಯನ್ನು ಉತ್ತೇಜಿಸುತ್ತದೆ

**31. ಆಬ್ಸಿಸಿಕ್‌ಆಮ್ಲದ ಕಾರ್ಯ ತಿಳಿಸಿ.**

* ಇದು ಸಸ್ಯಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ಹಾರ್ಮೋನು, * ಪತ್ರರಂಧ್ರಗಳ ಮುಚ್ಚುವಿಕೆಯನು ಚೋಧಿಸುತ್ತದೆ,
* ಕಾಂಡದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ, * ಸಸ್ಯಗಳಲ್ಲಿ ಎಲೆ ಉದುರುವಿಕೆಯನ್ನು ನಿಧಾನಗೊಳಿಸುತ್ತದೆ.

**32. ಗುರತ್ವಾನುವರ್ತನೆ ಎಂದರೇನು?**
ಭೂಮಿಯ ಅಥವಾ ಗುರುತ್ವದ ಸೆಳೆತಕ್ಕೆ ಪ್ರತಿಯಾಗಿ ಕಾಂಡದ ಮೇಲ್ಮುಖ ಬೆಳವಣಿಗೆ ಮತ್ತು ಬೇರುಗಳ ಕೆಳಮುಖ ಬೆಳವಣಿಗೆಯನ್ನು ಗುರತ್ವಾನುವರ್ತನೆ ಎನ್ನುವರು.

**33. ಸಸ್ಯಗಳು ಬೇಳಕಿನಡೆಗೆ ಚಲಿಸುವ ಕ್ರಿಯೆಯನ್ನು ಏನೆಂದು ಕರೆಯುವರು?** ದ್ಯುತಿ ಅನುವರ್ತನೆ.

**34. ಒಂದು ಆಧಾರದ ಸುತ್ತ ಬಳ್ಳಿಕುಡಿಗಳ ಬೆಳವಣಿಗೆಯನ್ನು ಆಕ್ಸಿನ್‌ಗಳು ಹೇಗೆ ಉತ್ತೇಜಿಸುತ್ತವೆ?**
ಸಸ್ಯಗಳ ಬಳ್ಳಿಕುಡಿಗಳು ಸ್ಪರ್ಶಸೂಕ್ಷ್ಮವಾಗಿರುತ್ತವೆ. ಆಕ್ಸಿನ್‌ಗಳು ಸಸ್ಯದ ತುದಿಭಾಗಗಳಲ್ಲಿ ಉತ್ಪತ್ತಿಯಾಗುತ್ತವೆ. ಬಳ್ಳಿಕುಡಿಗಳು ಆಧಾರಕ್ಕೆ ಸ್ಪರ್ಶಿಸಿದ ತಕ್ಷಣ ಆಧಾರವನ್ನು ಸುರುಳಿಯಾಗಿ ಸುತ್ತಿಕೊಳ್ಳುತ್ತದೆ. ಇದಕ್ಕೆ ಬೇಕಾದ ಬಳ್ಳಿಗಳ ಉದ್ದವನ್ನು ಆಕ್ಸಿನ್ ಹೆಚ್ಚಿಸುತ್ತದೆ.

**35. ಜಲಾನುವರ್ತನೆಯನ್ನು ತೋರಿಸುವ ಒಂದು ಪ್ರಯೋಗವನ್ನು ವಿನ್ಯಾಸಗೊಳಿಸಿ.**
ಸಸ್ಯದ ಭಾಗಗಳು ನೀರಿನೆಡೆಗೆ ಚಲಿಸುವುದನ್ನು ಜಲಾನುವರ್ತನೆ ಎನ್ನುವರು.
**ಪ್ರಯೋಗ:**
ಒಂದು ಅಗಲವಾದ ಗಾಜಿನ ಬಟ್ಟಲಿನಲ್ಲಿ ಮರಳು ಮಿಶ್ರಿತ ಮಣ್ಣನ್ನು ತೆಗೆದುಕೊಳ್ಳಿ.
ಒಂದೆರಡು ನೆನೆಸಿದ ಹುರುಳಿ ಬೀಜಗಳನ್ನು ಬಟ್ಟಲಿನ ಮಣ್ಣಿನಲ್ಲಿ ಮುಚ್ಚಿ.
ಬಟ್ಟಲಿನ ಒಂದು ಬದಿಯಲ್ಲಿ ಒಂದು ಚಿಕ್ಕ ಲೋಟವನ್ನು ಸಣ್ಣ ರಂಧ್ರ ಮಾಡಿ ಇರಿಸಿ.
ಲೋಟದಲ್ಲಿನ ನೀರನ್ನು ತುಂಬಿರಿ, ಒಂದೆರಡು ದಿನಗಳ ನಂತರ ವೀಕ್ಷಿಸಿ.
ಹುರುಳಿ ಬೀಜದ ಬೇರುಗಳು ಲೋಟದಲ್ಲಿ ಜಿನುಗುವ ನೀರಿನ ಕಡೆ ಚಲನೆ ಹೊಂದಿರುವುದನ್ನು ನಾವು ಕಾಣಬಹುದು.

**36. ಪ್ರಾಣಿಗಳಲ್ಲಿ ರಾಸಾಯನಿಕ ಹೊಂದಾಣಿಕೆಯು ಹೇಗೆ ನಡೆಯುತ್ತದೆ?**
ಹಾರ್ಮೋನುಗಳ ಉತ್ಪತ್ತಿಯಿಂದ ಪ್ರಾಣಿಗಳಲ್ಲಿ ರಾಸಾಯನಿಕ ಹೊಂದಾಣಿಕೆಯು ನಡೆಯುತ್ತದೆ.

**37. ಮಿದುಳು ಬಳ್ಳಿಯು ಗಾಯಗೊಂಡ ಸಂದರ್ಭದಲ್ಲಿ ಯಾವ ಸಂಕೇತಗಳ ರವಾನೆಗೆ ಅಡ್ಡಿಯುಂಟಾಗುತ್ತದೆ?**
ಮಿದುಳುಬಳ್ಳಿಯು ಗಾಯಗೊಂಡಾಗ ಪರಾವರ್ತಿತಕ್ರಿಯೆ ಮತ್ತು ಅನೈಚ್ಛಿಕ ಕ್ರಿಯೆಗಳ ಸಂಕೇತಗಳ ರವಾನೆಗೆ ಅಡ್ಡಿಯುಂಟಾಗುತ್ತದೆ.

**38. ಒಂದು ಜೀವಿಯಲ್ಲಿ ಸಹಭಾಗಿತ್ವ ಮತ್ತು ನಿಯಂತ್ರಣ ವ್ಯವಸ್ಥೆಯ ಅಗತ್ಯತೆ ಏನು?**
ಬಹುಕೋಶ ಜೀವಿಗಳು, ಅದರಲ್ಲೂ ಪ್ರಾಣಿಗಳು ಹೆಚ್ಚು ಚಟುವಟಕೆಯಿಂದ ಕೂಡಿರುತ್ತವೆ, ದೇಹದ ಪ್ರತಿಯೊಂದು ಅಂಗವು ನಿರ್ದಿಷ್ಟ ಕಾರ್ಯವನ್ನು ಮಾಡುತ್ತದೆ. ಈ ಎಲ್ಲಾ ಅಂಗಗಳ ಕಾರ್ಯ ಚಟುವಟಿಕೆಗೆ ಸಹಭಾಗಿತ್ವ ಮತ್ತು ನಿಯಂತ್ರಣದ ಅವಶ್ಯಕತೆಯಿದೆ.

**39. ಮಾನವನಲ್ಲಿ ನಿರ್ನಾಳ ಗ್ರಂಥಿಗಳು, ಅವುಗಳು ಕಂಡುಬರುವ ಭಾಗ ಮತ್ತು ಅವುಗಳ ಕಾರ್ಯಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.**

| ಗ್ರಂಥಿ ಹೆಸರು | ಕಂಡುಬರುವ ಭಾಗ | ಸ್ರವಿಸುವ ಹಾರ್ಮೋನು | ಕಾರ್ಯ |
|---|---|---|---|
| **1. ಪಿಟ್ಯುಟರಿ ಗ್ರಂಥಿ** | ಮಿದುಳು | ಪಿಟ್ಯುಟರಿನ್ **(ಬೆಳವಣಿಗೆ ಹಾರ್ಮೋನು)** | ಎಲ್ಲಾ ಹಾರ್ಮೋನುಗಳ ಸ್ರವಿಕೆ ಮತ್ತು ಅವುಗಳ ಕಾರ್ಯದ ನಿಯಂತ್ರಣ |
| **2. ಥೈರಾಯಿಡ್ ಗ್ರಂಥಿ** | ಕುತ್ತಿಗೆಯ ಮುಂಭಾಗ | ಥೈರಾಕ್ಸಿನ್ **(ವ್ಯಕ್ತಿತ್ವದ ಹಾರ್ಮೋನು)** | ದೇಹದ ಉಪಚಯಾಪಚಯ ಕ್ರಿಯೆಯ ವೇಗದ ವೇಲೆ ಪ್ರಭಾವ ಬೀರುವುದು.<br>ದೇಹದ ತಾಪ ಹೆಚಿಸುವುದಲ್ಲದೆ, ಮಾನಸಿಕ ಮತ್ತು ದೈಇಹಿಕ ಬೆಳವಣಿಗೆಯನ್ನು ವೃದ್ಧಿಸುತ್ತದೆ. |
| **3. ಪ್ಯಾರಾಥೈರಾಯಿಡ್ ಗ್ರಂಥಿ** | ಥೈರಾಯಿಡ್ ಗ್ರಂಥಿಯ ಒಳಗೆ | ಪ್ಯಾರಾಥಾರ್ಮೋನ್ | ರಕ್ತ ಮತ್ತು ಮೂಳೆಗಳಲ್ಲಿನ ಕ್ಯಾಲ್ಸಿಯಂ ಪ್ರಮಾಣದ ನಿರ್ವಹಣೆ. |
| **4. ಮೆದೋಜಿರಕ ಗ್ರಂಥಿ (ಲ್ಯಾಂಗರ್‌ಹಾನ್ಸ್‌ನಕಿರು ದ್ವೀಪಗಳು)** | ಮೆದೋಜಿರಕಗ್ರಂಥಿ | ಇನ್ಸುಲಿನ್ ಮತ್ತು ಗ್ಲುಕಗಾನ್ | * **ಇನ್ಸುಲಿನ್**: ಗ್ಲುಕೋಸನ್ನು ಗ್ಲೈಕೋಜನ್ ಆಗಿ ಪರಿವರ್ತಿಸುತ್ತದೆ.<br>* **ಗ್ಲುಕಗಾನ್**: ಗ್ಲೈಕೋಜನ್ ಅನ್ನು ಗ್ಲುಕೋಸ್ ಆಗಿ ಪರಿವರ್ತಿಸುತ್ತದೆ. |

| | | | |
|---|---|---|---|
| **5. ಅಡ್ರಿನಲ್ ಗ್ರಂಥಿ** | ಮೂತ್ರಜನಕಾಂಗದ ಮೇಲೆ | ಅಡ್ರಿನಾಲಿನ್ **(ತುರ್ತುಪರಿಸ್ಥಿತಿ ಹಾರ್ಮೋನ್),** ನಾರ್ಅಡ್ರಿನಾಲಿನ್ ಮತ್ತು ಡೋಪಮಿನ್ | * ಅಡ್ರಿನಾಲಿನ್: ಹೃದಯದ ಬಡಿತ, ಉಸಿರಾಟ ಕ್ರಿಯೆಯ ನಿಯಂತ್ರಣ<br>* ಇದು ಭಯ, ಕೋಪ ಆತಂಕ ಮತ್ತು ಉದ್ವೇಗ ಮುಂತಾದ ತುರ್ತುಪರಿಸ್ಥಿತಿಗಳಲ್ಲಿ ಸ್ರವಿಕೆಯಾಗಿ, ದೇಹವು ಒತ್ತಡ ಪರಿಸ್ಥಿತಿಯನ್ನು ಎದುರಿಸಲು ಸಜ್ಜುಗೊಳಿಸುತ್ತದೆ. |
| **6. ಜನನಗ್ರಂಥಿಗಳು:**<br>***ವೃಷಣ ಮತ್ತು ಅಂಡಾಶಯ** | ಪೆಲ್ವಿಕ್ ಪ್ರದೇಶ | ವೃಷಣ:<br>ಆಂಡ್ರೋಜನ್ – ಟೆಸ್ಟೋಸ್ಟೀರಾನ್<br><br>ಅಂಡಾಶಯ:<br>ಈಸ್ಟ್ರೋಜನ್, ಪ್ರಾಜೆಸ್ಟಿರಾನ್ | ಟೆಸ್ಟೋಸ್ಟೀರಾನ್– ಪುರುಷರಲ್ಲಿ ಗಂಡಸಿನ ಲಕ್ಷಣಗಳ ಬೆಳವಣಿಗೆ<br>ಈಸ್ಟ್ರೋಜನ್ – ಪ್ರೌಢಾವಸ್ಥೆ ತಲುಪಿದಾಗ ಸ್ತ್ರೀಯರ ಲಕ್ಷಣಗಳ ಬೆಳವಣಿಗೆ<br>ಪ್ರೊಜೆಸ್ಟಿರಾನ್– ಗರ್ಭಾವಸ್ಥೆಯ ಸಂದರ್ಭದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡುತ್ತದೆ. |

**40. ಆಲ್ಕೋಹಾಲ್ ಸೇವನೆ ಮಾಡಿದ ಕೆಲವು ವ್ಯಕ್ತಿಗಳ ನಡೆ ಅಸ್ಥಿರವಾಗಿರುತ್ತದೆ. ಇದಕ್ಕೆ ಕಾರಣವೇನು?**

ದೇಹದ ಸಮತೋಲನ ಮತ್ತು ಸ್ನಾಯುಗಳ ಚಲನೆಗೆ ಕಾರಣವಾದ ಅನುಮಸ್ತಿಷ್ಕದ ಮೇಲೆ ಆಲ್ಕೋಹಾಲ್ ಪರಿಣಾಮ ಬೀರುವುದರಿಂದ ಅವರುಗಳ ನಡೆ ಅಸ್ಥಿರವಾಗಿರುತ್ತದೆ.

*******************